

# ಮರಳಿನ ಮೇಲೆ ಕುದುರೆ ನಡಿಗೆ ಪಂದ್ಯ!

ಕುದುರೆ ರೇಸ್ ಎಂದಾಗ ಸಾಮಾನ್ಯವಾಗಿ ಜೋರಾಗಿ ಓಡುವ ಕುದುರೆಗಳ ಚಿತ್ರವೇ ನಮ್ಮ ಕಣ್ಮುಂದೆ ಬರುತ್ತದೆ. ಆದರೆ ಜಪಾನ್ ದೇಶದ ಹೊಕ್ಕೈಡೊ ದ್ವೀಪದಲ್ಲಿ ವಿಚಿತ್ರವಾದ ಕುದುರೆ ರೇಸ್ ನಡೆಯುತ್ತದೆ. ಈ ಪಂದ್ಯದಲ್ಲಿ ಕುದುರೆಯು ವೇಗವಾಗಿ ಓಡುವ ಪ್ರಶ್ನೆಯೇ ಬರುವುದಿಲ್ಲ, ಬದಲಾಗಿ ಕುದುರೆಯ ತಾಕತ್ತು ಹಾಗೂ ಸಹಿಷ್ಣುತೆಯೇ ನಿರ್ಣಾಯಕ ಅಂಶ! 'ಬ್ಯಾನ್ ಈ' ಎಂದು ಕರೆಯುವ ಈ ರೇಸ್‌ನಲ್ಲಿ ಭಾಗವಹಿಸುವ ಕುದುರೆಗಳನ್ನು 'ಬ್ಯಾನ್ ಬಾ' ಎಂದು ಕರೆಯಲಾಗುತ್ತದೆ.

ಈ ಕುದುರೆಗಳು ಜೋರಾಗಿ ಓಡುವ ಕುದುರೆಗಳಿಗಿಂತ ಭಿನ್ನವಾಗಿದ್ದು 800 ರಿಂದ 1200 ಕಿಲೋಗ್ರಾಂಗಳಷ್ಟು ತೂಕವುಳ್ಳದ್ದಾಗಿರುತ್ತವೆ. ತಮ್ಮ ಗಾತ್ರಕ್ಕೆ ಅನುಗುಣವಾಗಿ ಈ ಬಲಶಾಲಿ ಕುದುರೆಗಳು ಟನ್‌ಗಟ್ಟಲೆ ಭಾರವನ್ನು ಎಳೆಯಬಲ್ಲವು! ಬೇರೆಲ್ಲ ದೇಶಗಳಿಗಿಂತ ವಿಶಿಷ್ಟವೆನಿಸುವ ಈ ನಿಧಾನಗತಿಯ ಕುದುರೆ ರೇಸ್‌ನಲ್ಲಿ ಗೆಲುವು ಪಡೆಯಲು ಇದೇ ಬೇಕಾಗಿರುವುದು! 'ಬ್ಯಾನ್ ಈ 'ಸ್ಪರ್ಧೆಯ ಪಂದ್ಯದ ಮಾರ್ಗ (ರೇಸ್ ಟ್ರಾಕ್)ವು 200 ಮೀಟರ್‌ನಷ್ಟು ಉದ್ದವಿದ್ದು ಹಂತಹಂತವಾಗಿ ಒಂದು ಮೀಟರ್‌ನಷ್ಟು ಏರಿಕೆ ಹಾಗೂ 1.6 ಮೀಟರ್‌ನಷ್ಟು ಇಳಿಜಾರು ಇರುವ ಎರಡು ಪ್ರತಿರೋಧಗಳನ್ನು (ತಡೆಗಳನ್ನು) ಹೊಂದಿರುತ್ತದೆ.

ಪಂದ್ಯದಲ್ಲಿ ಭಾಗವಹಿಸುವ ಕುದುರೆಗಳು ತಮಗೆ ಕಟ್ಟಿರುವ 450 ರಿಂದ ಒಂದು ಟನ್ ನಷ್ಟು ಭಾರವುಳ್ಳ ಕಬ್ಬಿಣದ ಬಂಡಿಯನ್ನು ಮರಳ ಟ್ರಾಕ್‌ನಲ್ಲಿ ಎಳೆದುಕೊಂಡು ಸಾಗಿ ಗುರಿಯನ್ನು ತಲುಪಬೇಕು.ಇದು ಬಹಳ ತ್ರಾಸದಾಯಕ ಕೆಲಸ ಅದರಲ್ಲೂ ವಿಶೇಷವಾಗಿ ತಡೆಗಳನ್ನು ಕ್ರಮಿಸುವಾಗ ಕುದುರೆಗಳಿಗೂ ವಿಶ್ರಾಂತಿ ನೀಡಬೇಕಾಗಿರುತ್ತದೆ. ಇಲ್ಲಿ ಕುದುರೆಗಳು ಮುಂದೆ ಸಾಗಲು ಪ್ರೋತ್ಸಾಹ ನೀಡುವುದು ಮಾತ್ರ ಜಾಕಿಗಳ ಪಾತ್ರವೇ ಹೊರತು ಅವುಗಳನ್ನು ಜೋರಾಗಿ ಓಡಿಸುವುದಲ್ಲ. ಅಡೆತಡೆಗಳ ಮಧ್ಯೆ ಕುದುರೆಗಳಿಗೆ ಅಗಾಗ್ಗೆ ವಿಶ್ರಾಂತಿಯನ್ನು ನೀಡುತ್ತಾ ಗುರಿಯನ್ನು ತಲುಪಲು ತಮ್ಮದೇ ಆದ ತಂತ್ರಗಾರಿಕೆಯನ್ನು ಹೆಣೆಯುವ ಜಾಕಿಗಳು ಬಾರುಕೋಲನ್ನು ಹಿಡಿದಿರುವುದಿಲ್ಲ. ಇತರೆ ಕುದುರೆ ಪಂದ್ಯಗಳಲ್ಲಿ ಕುದುರೆಯ ಮೂಗು ಗೆಲುವನ್ನು ನಿರ್ಧರಿಸಿದರೆ, 'ಬ್ಯಾನ್ ಈ'ಸ್ಪರ್ಧೆಯಲ್ಲಿನ ಕುದುರೆಗಳು ತಮಗೆ ಕಟ್ಟಿರುವ ಭಾರದ ಬಂಡಿಯನ್ನು ಪೂರ್ತಿಯಾಗಿ ಮುಕ್ತಾಯದ ಗೆರೆಯನ್ನು ತಲುಪಿಸಬೇಕು. ಇದನ್ನು ನೋಡಲೆಂದೇ ಸಾವಿರಾರು ವೀಕ್ಷಕರು ರಸ್ತೆಯ ಇಕ್ಕೆಲಗಳಲ್ಲಿ ಸೇರಿರುತ್ತಾರೆ. ತಮ್ಮ ಮೆಚ್ಚಿನ ಕುದುರೆಯು ಭಾರವನ್ನು ಎಳೆಯಲು ಪ್ರಯಾಸ ಪಡುತ್ತಿರುವಾಗ ಅದರ ಹೆಸರನ್ನು ಕೂಗಿ ಜಯಕಾರ ಹಾಕುತ್ತಾ ಹುರಿದುಂಬಿಸುತ್ತಾರೆ.

■ ವಿದ್ಯಾ ವಿ. ಹಾಲಭಾವಿ